# ಕರ್ನಾಟಕ ವಿಧಾನ ಪರಿಷತ್ತು

**ಶ್ರೀ ಪ್ರತಾಪಸಿಂಹ ನಾಯಕ್.ಕೆ, ಮಾನ್ಯ ವಿಧಾನ ಪರಿಷತ್ ಸದಸ್ಯರು ನಿಯಮ 72 ರ ಮೇರೆಗೆ ಮಂಡಿಸಿರುವ ಸೂಚನೆ.**

**ಸದಸ್ಯರ ಹೆಸರು** : ಶ್ರೀ ಪ್ರತಾಪಸಿಂಹ ನಾಯಕ್.ಕೆ
**ವಿಷಯ** : ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯಲ್ಲಿ ಹೆಂಚಿನ ಕಾರ್ಖಾನೆಗಳ ಸ್ಥಿತಿಗತಿಗಳ ಬಗ್ಗೆ.

**ಪ್ರಶ್ನೆ:** ಕರ್ನಾಟಕ ಕರಾವಳಿಯಲ್ಲಿ ವಿಶೇಷವಾಗಿ ಗುರುತಿಸಿಕೊಂಡಿರುವ ಹೆಂಚು ಉದ್ಯಮ ತೀವ್ರ ಕುಸಿತ ಕಂಡು ಮಾಲೀಕರು ಸಂಕಷ್ಟದಲ್ಲಿದ್ದಾರೆ. ರಾಜ್ಯದ ಉಡುಪಿ ಹಾಗೂ ಮಂಗಳೂರು ಜಿಲ್ಲೆಯಲ್ಲಿ ವಿಶೇಷವಾಗಿ ಆವೆ ಮಣ್ಣಿನ ಹೆಂಚು ನಿರ್ಮಾಣಗೊಳ್ಳುತ್ತಿದ್ದು, ಸದರಿ ಹೆಂಚುಗಳ ಖರೀದಿ ಕ್ಷೀಣಿಸುವುದರ ಜೊತೆಗೆ ಕಚ್ಚಾವಸ್ತುಗಳ ಅಲಭ್ಯತೆ, ದರ ಏರಿಕೆ, ಕಚ್ಚಾವಸ್ತುಗಳಿಗೆ ಇನ್‌ಪುಟ್ ಕ್ಲೈಮ್ ಇಲ್ಲದಿರುವುದು, ಆವೆಮಣ್ಣು ದರ ಹೆಚ್ಚಳ, ಆವೆಮಣ್ಣು ತೆಗೆಯಲು ಇರುವ ಕಾನೂನು ಕಟ್ಟಳೆಗಳು, ಗಗನಕ್ಕೇರಿರುವ ಡೀಸೆಲ್ ಮತ್ತು ಕಟ್ಟಿಗೆ ಧಾರಣೆ, ಶೇ. 12 ರಷ್ಟು ಜಿ.ಎಸ್.ಟಿ ಹಾಗೂ ಇನ್ನೂ ಮುಂತಾದ ಸಮಸ್ಯೆಗಳಿಂದ ಈ ವ್ಯಾಪ್ತಿಯಲ್ಲಿನ ಹೆಂಚಿನ ಕಾರ್ಖಾನೆಗಳು ಮುಚ್ಚುವ ಹಂತ ತಲುಪಿರುವ ಗಂಭೀರ ಸಮಸ್ಯೆ ಕುರಿತು ಸದನದಲ್ಲಿ ಪ್ರಸ್ತಾಪಿಸಲು ಬಯಸುತ್ತೇನೆ.

**ಉತ್ತರ:**

**ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯಲ್ಲಿ ಹೆಂಚಿನ ಕಾರ್ಖಾನೆಗಳ ಸ್ಥಿತಿಗತಿಗಳ ಬಗ್ಗೆ**

1. ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಹೆಂಚಿನ ಉದ್ಯಮ ಸುಮಾರು 100 ವರ್ಷಗಳಷ್ಟು ಹಿಂದೆ ಪ್ರಾರಂಭವಾಗಿರುತ್ತದೆ.
2. ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಇದ್ದ 59 ಹೆಂಚಿನ ಕೈಗಾರಿಕೆಗಳ ಪೈಕಿ 39 ಘಟಕಗಳು ಮುಚ್ಚಲ್ಪಟ್ಟಿದ್ದು ಈಗ 20 ಘಟಕಗಳು ಮಾತ್ರ ಕಾರ್ಯನಿರ್ವಹಿಸುತ್ತಿವೆ.
3. ಈ ಕಾರ್ಖಾನೆಗಳು ಕಚ್ಚಾವಸ್ತು/ ಉತ್ಪನ್ನಗಳನ್ನು ಜಲಮಾರ್ಗದ ಮೂಲಕ ಸಾಗಾಣಿಕೆಗೆ ಅನುಕೂಲವಾಗುವಂತೆ ನದಿ/ ಸಮುದ್ರ ತಟದಲ್ಲಿ ಅಥವಾ ಕಚ್ಚಾವಸ್ತು ಲಭ್ಯತೆ ಇರುವ ಸ್ಥಳದ ಸಮೀಪ ಸ್ಥಾಪನೆಯಾಗಿರುತ್ತವೆ.
4. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪ್ರಸಕ್ತ 10 ಕಾರ್ಖಾನೆಗಳು ಮಾತ್ರ ಕಾರ್ಯನಿರ್ವಹಿಸುತ್ತಿವೆ.
5. ಉಳಿದ ಕಾರ್ಖಾನೆಗಳು ಮುಚ್ಚಿದ್ದು, ಸದರಿ ಜಾಗದಲ್ಲಿಇತರೇ ವಾಣಿಜ್ಯ / ಪ್ರವಾಸೋದ್ಯಮ ಚಟುವಟಿಕೆಗಳು ಪ್ರಾರಂಭವಾಗಿವೆ.
6. ಕಾರ್ಯ ನಿರ್ವಹಿಸುತ್ತಿರುವ ಕಾರ್ಖಾನೆಗಳು ಹೆಂಚಿನ ಜೊತೆಗೆ ಇಟ್ಟಿಗೆ ಮುಂತಾದ ಉತ್ಪನ್ನಗಳನ್ನು ತಯಾರಿಸುತ್ತಿವೆ.

**ಕಾರ್ಖಾನೆಗಳು ಮುಚ್ಚಲು ಮುಖ್ಯ ಕಾರಣಗಳು**

1. ಈ ಹಿಂದೆ ಹೆಂಚಿನ ಮನೆಗಳನ್ನು ಕಟ್ಟುತ್ತಿದ್ದು, ಪ್ರಸಕ್ತ RCC ಮೇಲ್ಚಾವಣಿಯ ಮನೆಗಳನ್ನು ಕಟ್ಟುತ್ತಿರುವುದರಿಂದ, ಹೆಂಚುಗಳಿಗೆ ಬೇಡಿಕೆ ಕಡಿಮೆಯಾಗಿರುತ್ತದೆ.
2. ಮಾರುಕಟ್ಟೆಯಲ್ಲಿ ಪರ್ಯಾಯ ಉತ್ಪನ್ನಗಳು ಕಡಿಮೆ ಬೆಲೆಗೆ ಸುಲಭವಾಗಿ ಸಿಗುತ್ತಿರುವುದರಿಂದ, ಹೆಂಚುಗಳಿಗೆ ಬೇಡಿಕೆ ಕಡಿಮೆಯಾಗಿರುತ್ತದೆ.
3. ಹೆಂಚಿನ ಕಾರ್ಖಾನೆಗಳಿಗೆ ಅಗತ್ಯವಿರುವ ಕಚ್ಚಾವಸ್ತು ಆವೆಮಣ್ಣಿನ ಲಭ್ಯತೆಯೂ ಕಡಿಮೆಯಾಗಿರುತ್ತದೆ. ಹೆಂಚಿನ ಕಾರ್ಖಾನೆಗಳ ಸಮೀಪವಿದ್ದ ಆವೆಮಣ್ಣಿನ ಜಾಗಗಳು ಪ್ರಸಕ್ತ ಕೈಗಾರಿಕಾ ಪ್ರದೇಶಗಳಾಗಿ, ಮನೆ ನಿವೇಶನಗಳಾಗಿ ಅಥವಾ ಇನ್ನಿತರ ರೀತಿಯಲ್ಲಿ ಅಭಿವೃದ್ಧಿ ಹೊಂದಿರುತ್ತವೆ. ಇದರಿಂದಾಗಿ ಕಚ್ಚಾವಸ್ತುವಿಗಾಗಿ ದೂರದ ಪ್ರದೇಶಗಳಿಗೆ ಹೋಗಬೇಕಾಗಿರುತ್ತದೆ. ಇದರಿಂದ ಕಚ್ಚಾವಸ್ತುವಿನ ವೆಚ್ಚವೂ ಜಾಸ್ತಿಯಾಗಿ ಉತ್ಪಾದನಾ ವೆಚ್ಚವೂ ಹೆಚ್ಚಾಗಿರುತ್ತದೆ.
4. ಅಲ್ಲದೇ, ಸಮೀಪದ ಕೇರಳ ರಾಜ್ಯದಲ್ಲಿಆವೆಮಣ್ಣನ್ನು ತೆಗೆಯುವುದನ್ನು ನಿರ್ಬಂದಿಸಿದ್ದು, ಅಲ್ಲಿನ ಹೆಂಚಿನ ಉದ್ಯಮಗಳು ಕಚ್ಚಾವಸ್ತುವಿಗಾಗಿ ದ.ಕ. ಜಿಲ್ಲೆಯನ್ನೇಅವಲಂಭಿಸಿವೆ. ಇದರಿಂದಾಗಿ ಸ್ಪರ್ಧೆ ಹೆಚ್ಚಾಗಿ ಕಚ್ಚಾವಸ್ತು ಬೆಲೆ ಇನ್ನಷ್ಟು ಹೆಚ್ಚಾಗುತ್ತಿದೆ.
5. ಆವೆಮಣ್ಣನ್ನು ತೆಗೆಯುವುದು ಗಣಿ ಚಟುವಟಿಕೆಯಲ್ಲಿ ಬರುತ್ತಿದ್ದು, ಸಣ್ಣ ಸಣ್ಣ ಖಾಸಗಿ ಜಾಗದಲ್ಲಿ ಮಣ್ಣನ್ನು ತೆಗೆಯುವಾಗ ಪರವಾನಿಗೆ ಇತ್ಯಾದಿ ಕೆಲಸಗಳಿಗೂ ವೆಚ್ಚ ಹಾಗೂ ಸಮಯವೂ ವ್ಯಯವಾಗುತ್ತಿದೆ.
6. ಹೆಂಚುಗಳಿಗೆ ಈ ಹಿಂದೆ 5% ಜಿ.ಎಸ್.ಟಿ. ವಿಧಿಸಲಾಗುತ್ತಿದ್ದು, ಪ್ರಸಕ್ತ 12% ಜಿ.ಎಸ್.ಟಿ. ವಿಧಿಸಲಾಗುತ್ತಿದೆ. ಇದೂ ಸಹಾ ಮಾರುಕಟ್ಟೆಯಲ್ಲಿ ಸ್ಪರ್ಧಿಸಲು ಅಡಚಣೆಯಾಗಿದೆ.

7. ಕಾರ್ಮಿಕರ ಕೊರತೆ/ ಹೆಚ್ಚಿನ ವೇತನಗಳೂ ಸಹಾ ಹೆಂಚು ಕಾರ್ಖಾನೆಗಳಿಗೆ ದುಬಾರಿಯಾಗಿ ಪರಿಣಮಿಸಿವೆ.
8. ಇನ್ನೊಂದು ಮುಖ್ಯ ಕಾರಣವೆಂದರೆ, ಈ ಹೆಂಚಿನ ಕಾರ್ಖಾನೆಗಳು seasonal ಉದ್ಯಮಗಳಾಗಿದ್ದು, ಮಳೆಗಾಲದಲ್ಲಿ 4-5 ತಿಂಗಳುಗಳು ಕಾರ್ಯ ನಿರ್ವಹಿಸಲು ಸಾಧ್ಯವಾಗುವುದಿಲ್ಲ. ಆದರೆ ಈ ಅವಧಿಯ ಕಾರ್ಮಿಕವೇತನ, ಸಾಲದ ಕಂತು, ವಿದ್ಯುತ್ ಚ್ಛಕ್ತಿ ಬಿಲ್ಲು ಇತ್ಯಾದಿ ಹೆಚ್ಚುವರಿ ಹೊರೆಯಾಗಿರುತ್ತದೆ.
9. ಹೊಸ ತಲೆಮಾರಿನವರು ಈ ಹೆಂಚಿನ ಉದ್ಯಮಕ್ಕೆ ಬರಲು ಮನಸ್ಸು ಮಾಡುತ್ತಿಲ್ಲ

**ಉದ್ಯಮಿಗಳು ಸರ್ಕಾರದಿಂದ ಬಯಸುವುದೇನು?**

1. ಉತ್ಪನ್ನಗಳ ಮೇಲಿನ ಜಿ.ಎಸ್.ಟಿ. ತೆರಿಗೆ ಯನ್ನು ಕಡಿಮೆ ಮಾಡುವುದು.
2. ಕೈಗಾರಿಕೆಗಳಿಗೆ ಹಣಕಾಸಿನ ನೆರವು ಮತ್ತು ಸಹಾಯಧನ ಒದಗಿಸುವುದು.
3. ವಿದ್ಯುಚ್ಛಕ್ತಿಯನ್ನು ರಿಯಾಯಿತಿ ದರದಲ್ಲಿ ನೀಡುವುದು.
4. ಟೈಲ್ಸ್ ಮತ್ತು ಶೋಟೈಲ್ಸ್ ಬಳಸುವವರಿಗೆ ಅಂದರೆ ಮನೆ ಅಥವಾ ವಾಣಿಜ್ಯ ಕಟ್ಟಡಕ್ಕೆ ಸಬ್ಸಿಡಿಗಳನ್ನು ಒದಗಿಸುವುದು.
5. ಹೊಸದಾಗಿ ಸ್ಥಾಪಿಸಲಾದ ಕೈಗಾರಿಕೆಗಳ ಮೇಲೆ 1ರಿಂದ 5 ವರ್ಷಗಳವರೆಗೆ ತೆರಿಗೆಗಳು ಮತ್ತು ಶುಲ್ಕಗಳ ಮೇಲೆ ವಿನಾಯಿತಿಯನ್ನು ಒದಗಿಸುವುದು.
6. ಮಳೆಗಾಲದಲ್ಲಿ, ಉತ್ಪಾದನಾ ರಹಿತ ಅವಧಿಗೆ 5 ತಿಂಗಳವರೆಗೆ ವಿದ್ಯುತ್ ಬಿಲ್ಲಿನ ವಿನಾಯಿತಿ ಮತ್ತು ಒದಗಿಸುವುದು. ಹಾಗೂ ಇತರೆ ತೆರಿಗೆಗಳ ವಿನಾಯಿತಿ ನೀಡುವುದು.
7. ಮಳೆಗಾಲದಲ್ಲಿ ESI, EPF ಮತ್ತು ಇತರ ತೆರಿಗೆಗಳು/ ಶುಲ್ಕಗಳ ಪಾವತಿಯ ಮೇಲೆ ವಿನಾಯಿತಿಯನ್ನು ಒದಗಿಸುವುದು.
8. ರೂಫಿಂಗ್ ಟೈಲ್ಸ್ ಶೋ ಟೈಲ್ಸ್ ಗಳ ಬಳಕೆಯ ಬಗ್ಗೆ ಸಾರ್ವಜನಿಕರಿಗೆ ಶಿಕ್ಷಣವನ್ನು ಸಾಬೀತು ಪಡಿಸುವುದು, ಏಕೆಂದರೆ ಈ ವಸ್ತುಗಳು ಪರಿಸರ ಸ್ನೇಹಿಯಾಗಿರುತ್ತವೆ.
9. ಕಚ್ಚಾ ವಸ್ತುಗಳಾದ ಆವೆಮಣ್ಣು ಹಾಗೂ ಉರುವಲುಗಳಿಗೆ ದರ ನಿಗದಿಮಾಡುವುದು.

**ಸರ್ಕಾರದ ಕ್ರಮ:**

1. ಈ ಕೈಗಾರಿಕೆಗಳು ಕಾಲ ಕಾಲಕ್ಕೆ ಬದಲಾಗುವ ತಂತ್ರಜ್ಞಾನ ಅಳವಡಿಸಿಕೊಳ್ಳಲು ಅನುಕೂಲವಾಗುವಂತೆ ಕೈಗಾರಿಕಾ ನೀತಿ 2020-25 ರಲ್ಲಿ "ತಂತ್ರಜ್ಞಾನ ಉನ್ನತೀಕರಣಕ್ಕೆ ಕೈಗಾರಿಕೆಗಳು ಪಡೆಯುವ ಸಾಲಕ್ಕೆ ಶೇ 5-6% ಬಡ್ಡಿ ಸಹಾಯಧನವನ್ನು ನೀಡಲಾಗುತ್ತಿದೆ.
2. ಹೊಸ ಕೈಗಾರಿಕಾ ನೀತಿ 2020-25 ರಡಿಯಲ್ಲಿ ಹೊಸ ಬಂಡವಾಳ ಹೂಡಿಕೆಗೆ (ಹೊಸ ಘಟಕ, ವಿಸ್ತರಣಾ ಘಟಕ, ವೈವಿದ್ಯೀಕರಣ ಘಟಕ, ಆಧುನೀಕರಣ ಘಟಕಕ್ಕೆ) ಒಟ್ಟು ಸ್ಥಿರಾಸ್ತಿಯ ಶೇ 25% ರಿಂದಶೇ 35% ರಷ್ಟು ಗರಿಷ್ಟ ರೂ.1.05 ಕೋಟಿ ಬಂಡವಾಳ ಹೂಡಿಕೆ ಸಹಾಯಧನ ನೀಡಲಾಗುತ್ತಿದೆ.
3. ಹೊಸ ಬಂಡವಾಳ ಹೂಡಿಕೆಗೆ ಶೇ 75% ರಿಂದ ಶೇ 100% ಮುದ್ರಾಂಕ ಶುಲ್ಕ ವಿನಾಯಿತಿ ಮತ್ತು ನೊಂದಣಿ ಶುಲ್ಕ ರಿಯಾಯಿತಿಯನ್ನು ನೀಡಲಾಗುತ್ತಿದೆ.
4. ಭೂ ಪರಿವರ್ತನೆ ಶುಲ್ಕವನ್ನು ಶೇ 75- ರಿಂದ ಶೇ 100% ರಷ್ಟು ಮರುಪಾವತಿ ಮಾಡಲಾಗುತ್ತಿದೆ.
5. ವಿದ್ಯುತ್ ತೆರಿಗೆ ವಿನಾಯಿತಿಯನ್ನು ಶೇ 100% ಗರಿಷ್ಟ 4 ರಿಂದ 8 ವರ್ಷಗಳವರೆಗೆ ನೀಡಲಾಗುತ್ತಿದೆ.
6. ಸೂಕ್ಷ್ಮ ಮತ್ತು ಸಣ್ಣ ಕೈಗಾರಿಕೆಗಳಿಗೆ ಅವು ಬಳಸಿದ ಪ್ರತಿ ಯುನಿಟ್ ರೂ 1 ರಂತೆ 3 ವರ್ಷಗಳ ಕಾಲ ವಿದ್ಯುತ್ ಸಹಾಯಧನವನ್ನು ನೀಡಲಾಗುತ್ತಿದೆ.

**ಸಿಐ 20 ಎಸ್ಎಸ್ಐ 2024**

**(ಶರಣಬಸಪ್ಪ ದರ್ಶನಾಪೂರ)**
ಸಣ್ಣ ಕೈಗಾರಿಕೆ ಮತ್ತು ಸಾರ್ವಜನಿಕ
ಉದ್ದಿಮೆಗಳ ಸಚಿವರು